# ಕೆಲವರು ಕೆಂದಾವರೆ ಹಾಸಿ ಪವಡಿಸನೆ ಪವಡಿಸುವೆ

(ಹರಿ ಸುಲಭ ಸುಳಾದಿ)

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 124.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 145.
3. **Note:** This suladi is not available in other standard book that I referred, by Sri Pavanje Guru Rao.

**ಧ್ರುವ ತಾಳ**

ಕೆಲವರು ಕೆಂದಾವರೆ ಹಾಸಿ ಪವಡಿಸೆನೆ ಪವಡಿಸುವೆ

ಕೆಲವರುಪಬರ್ಹಣವ ಈಯಲು ನೀನಾನುವೆಯೊ

ಕೆಲವರು ಕೇತಕಿ ಚಾಮರ ಬೀಸಲು ನೀನಲಿವೆ

ಕೆಲವರು ಪಾದ ಪದುಮಗಳ ಒತ್ತಲು ನೀನೊಲಿವೆ

ಕೆಲವರು ತೋಳ್ಗೊಡೆ ಮೈಮೊಗವೆರಸಿ ಅಪ್ಪಲು ಮರಳಿ ಅಪ್ಪುವೆ

ಕೆಲವರು ಕೊಂಬು ಕೊಳಲು ತುತ್ತೂರಿ ಮೌರ್‍ಯಗಳ ಬಾರಿಸೆ ನೀನೊಲಿವೆ

ಕೆಲವರು ಮಂದ್ರ ಮಧ್ಯಮ ತಾರದಿ ಅನೇಕ ರಾಗಗಳ ಪಾಡೆ

ಝಣ ಝಣ ಝಣರೆಂದುಗ್ಗಡಿಸೆ ಕೆಲವರು

ಧಿಮ್ ಧಿಮ್ ಧಿಮ್ ಧಿಮಿಕನುತಲಿ ಕೆಲವರು ನೃತ್ಯವಾಡೆ ಸುಖಿಸುವೆ

ಜಲಜಾಕ್ಷ ಏನಿನ್ನಿವರ ಪುಣ್ಯವೆಂತು ಬಣ್ಣಿಪೆ

ಹಲಧರನು ನಿನ್ನೊಡನೆ ನಿನ್ನೊಳಾಡುವ ಗೋಪ ಗೋಪಿ ಗೋ–

ಗೋಕುಲಿಕೆ ನಮೋ ಪುರಂದರ ವಿಠಲ ॥ ೧ ॥

**ಮಟ್ಟ ತಾಳ**

ನಖದ ಬೆಳಕು ಚಂದ್ರ ಸೂರ್ಯರ ಸೋಲಿಸಿ ಮೆರೆಯುತಿದೆ ನೋಡು

ಮುಖದಧಿಪತಿಯೆ ನಿನ್ನ ಸರ್ವಾಂಗದ ಕಾಂತಿ ಲಾವಣ್ಯಗಳನೆ ಕಂಡು

ಸುಖಿಸಿದರಂತವರು ನಿನ್ನೊಡನೆ ಇದ

ನಿಖಿಳ ಜಗತ್ಕಾರಣ ನೀನೆ ಬಲ್ಲೆ

ಮಕರಕುಂಡಲಾಭರಣವೆಸೆಯೆ

ವಿಖನಸಾರ್ಚಿತ ಶ್ರೀ ಪುರಂದರ ವಿಠಲ ರಾಯ ॥ ೨ ॥

**ತ್ರಿವಿಡೆ ತಾಳ**

ರತ್ನ ಮುಕುಟವು ರತ್ನ ಮುಕುಟದಂತೆ

ರತ್ನ ಮುಕುಟಕ್ಕೆ ತುಂಬೆಯೆರಗಲು

ಕತ್ತಾವರೆ ವೀರೆಯ ದಂಡೆ ಮರೆಯೆ

ಪೀತಾಂಬರ ಕಾಂಚೀದಾಮಾದಿ ಶೋಭಿತ

ಚಿತ್ತವಲ್ಲಭ ಪುರಂದರ ವಿಠಲನೊಳು

ಉತ್ತರೋತ್ತರದ ಶೃಂಗಾರವವ್ವ ॥ ೩ ॥

**ಅಟ ತಾಳ**

ಅನಂತ ವೇದ ಸಮೂಹಗಳಿಂದಲಿ

ಅಜಾದಿ ಸುರರು ಅರಸಲೇತಕ್ಕಿನ್ನು?

ಆ ನಂದ ಯಶೋದೆಯರ ಮನೆಯಲ್ಲಿ

ವೃಂದಾವನದಿ ಕಾಣಿಸಿಕೊಂಡನವ್ವ

ನಂದ–ನಂದನ ಕಂದ ಪುರಂದರ ವಿಠಲ

ಪರದೇವತೆ ಈತನಲ್ಲವೇನವ್ವ ॥ ೪ ॥

**ಆದಿ ತಾಳ**

ಬೆಣ್ಣೆಯ ಬಟ್ಟಲ ಕಂಡು ಒರಳ ಮೇಲೇರಿ ಕೊಂಡು

ಚಿಣ್ಣರಿಗೆ ತುತ್ತೀವ ಠಕ್ಕುತನವೇನೆಂದು

ಕಣ್ಣ ಝೇಂಕರಿಸುತ್ತ ಕಂಜಾಕ್ಷ ಎಂದು ಗೋಪಿ

ದೊಣ್ಣೆಯ ಕೊಂಡಟ್ಟಿದಳಪ್ರತಿಮ ಪ್ರಭಾವನ್ನ

ಹೆಣ್ಣೇನು ನೋಂತಳು ಪುರಂದರ ವಿಠಲನ

ಕಣ್ಣಿಯಲ್ಲಿ ಕಟ್ಟಿ ಆಳಿದಳು ವಿಶ್ವ ಕಾಯನ ॥ ೫ ॥

**ಜತೆ**

ನಂದ ದಾಮವ ಬಿಟ್ಟು ಕಂದನ ಬಿಗಿದಪ್ಪಿ

ಅಂದು ವಂದಿಸಿದನು ಪುರಂದರ ವಿಠಲನ ॥ ೬ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಸುಳಾದಿಯಲ್ಲಿ ಬಾಲಕೃಷ್ಣನ ಬಣ್ಣನೆಯೊಂದಿಗೆ ಆತನ ವಿಷಯಕವಾದ ಉತ್ಕಟ ಭಕ್ತಿಯನ್ನೂ ಹೇಳಲಾಗಿದೆ.

೧. **ಉಪಬರ್ಹಣ** = ದಿಂಬು

**ಉಗ್ಗಡಿಸು** = ಸಾರು, ಘೋಷಿಸು

೨. **ಮಖ** = ಯಜ್ಞ

**ವಿಖನಸರು** = ಋಷಿಗಳು

೩. **ಕತ್ತಾವರೆ** = ಕರಿಯ ತಾವರೆ

**ಮೀರೆ** = ಪರಿಮಳ

೫. **ನೋಂತಳೊ** = ವ್ರತ ಮಾಡಿದಳೊ

**ದಾಮ** = ಹಗ್ಗ

**Classification:** Suladi
**Name of Suladi:** hari sulabha suladi
**Ankita:** purandara vittala
**Location:** NA
**Category:** Krishna Leele
**Sub-Category:** padma, punya, yashode, gopi, gokula, Chandra, surya, sukha, loka, abharana, ratna, Ananta, veda, sura, arasa, vrindavana, devi, koosu, benne, hennu, rushi, vrata, Krishna, yagna,
**Pravachana:** NA
**Explanation:** NA